ಶ್ರೀ ಜೆ. ಎಲ್. ಕಬಾಡಿ — ಬೆಂಕಿ ಅಕಸ್ಮಿಕವಾಗಿದೆ ಎಂದು ಸರ್ಕಾರದವರು ಒಟ್ಟು 12 ಸಾವಿರ ರೂಪಾಯಿ ಮಂಜೂರು ಮಾಡಿದ್ದಾರೆ. ಇನ್‌ಷೂರೆನ್ಸ್ ಮಾಡಿದ ಒಂದು ತಿಂಗಳಲ್ಲಿ ಬೆಂಕಿಯನ್ನು ಹೊತ್ತಿಸಿ ಹಣವನ್ನು ಪಡೆಯಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಮಂತ್ರಿಗಳು ಕೊಟ್ಟ ಉತ್ತರದಲ್ಲಿ ಮೊಕದ್ದಮೆ ದಾಖಲು ಮಾಡಿಕೊಂಡಿಲ್ಲ, ಅಪರಾಧಕ್ಕೆ ಸಂಬಂಧಪಟ್ಟ ಎಫ್. ಐ. ಆರ್. ಇಲ್ಲ ಎಂದು ಹೇಳಿದರು. It is a contrary answer to the question asked by me. That is why I want to raise half-an-hour discussion on this issue. Kindly permit me Sir.

Mr. DEPUTY SPEAKER.—I will call the next question.

Contract with M.I.S.L. for Supply of Special Alloy Steel

779. Sri B. BYRAPPAJI (Turuvekere).—

Will the Minister for Industries be pleased to state :—

(*a*) when the contract agreement was executed by M/s. Bharat Forge of Poona with M. I. S. Ltd., in respect of purchase of special alloy steel ;

(*b*) the terms and conditions of the agreement ;

(*c*) the reason for not including price escalation clause as "subject to revision" in the agreement ;

(*d*) whether it is a fact that the rates supplied to M/s. Bharat Forge is very low ;

(*e*) if so, what was the actual selling rate fixed by the Management during that period ;

(*f*) the total loss due to this agreement ?

Sri S. M. KRISHNA (Minister for Industries).—

(*a*) The contract was entered into on 14th August 1968.

(*b*) *Vide* copy of letter dated 14th August 1968 placed on the Table of the House.*

(*c*) A cause to cover statutory increases during the period of Supply has been included in the agreement concluded with the Bharat Forge Co. Ltd.

(*d*) No.

(*e*) and (*f*) *Vide* statement placed on the Table of the House.*

ಶ್ರೀ ಬಿ. ಬೈರಪ್ಪಾಜಿ.—ಭಾರತ್ ಫೋರ್ಜ್ ಕಂಪನಿಯವರಿಗೆ ಕಡಿಮೆ ದರಿನಲ್ಲಿ ಸ್ಟೀಲನ್ನು ಮಾರಲು ಕೊಟ್ಟುದರಿಂದ ಸುಮಾರು 37,000 ರೂಪಾಯಿ ನಷ್ಟು ನಷ್ಟವಾಗಿದೆ. ಇದರ ಅಗ್ರಿಮೆಂಟಿನ ಒಂದು ಕ್ಲಾಸಿನಿಂದ ಹೀಗಾಗಿದೆ ಎಂದು ಹೇಳಿದ್ದಾರೆ. ಈಗ ಇದನ್ನು ಬದಲಾಯಿಸಿ ಅವರಿಂದ ನಷ್ಟವಾಗಿರುವ ಹಣವನ್ನು ಏಕೆ ವಸೂಲ ಮಾಡಲಿಲ್ಲ ?

* Copy Laid on the Table of the House *Vide* Lib No. 22 dated 23-3-1973.

† ಶ್ರೀ ಎಸ್. ಎಂ. ಕೃಷ್ಣ.—ಇದರ ಒಪ್ಪಂದದಲ್ಲಿ ಇರುವ ಹಾಗೆ ಒಪ್ಪಂದದ ಕ್ಲಾಜುಗಳನ್ನು ಬದಲಾಯಿಸಲು ಅವಕಾಶವಿದೆ. ಆದರೆ ಇದರಲ್ಲಿ 1965 ರಿಂದೀಚೆಗೆ ಯಾವ ರೀತಿಯಾದ ಒಪ್ಪಂದಗಳು ಇದುವರೆಗೆ ಆಗಿವೆ ಅವೆಲ್ಲವನ್ನೂ ಕೂಲಂಕಷವಾಗಿ ಪರಿಶೀಲನೆಮಾಡಲು ಈಗ ಶ್ರೀ ಆರ್. ಸಿ. ದತ್‌ರವರ ಒಂದು ಅಯೋಗವನ್ನು ನೇಮಕ ಮಾಡಲಾಗಿದೆ. ಅವರು ಬರುವ ಏಪ್ರಿಲ್ ತಿಂಗಳೊಳಗೆ ವರದಿ ಸಲ್ಲಿಸುವವರಾಗಿದ್ದಾರೆ. ಇದರ ಬಗ್ಗೆ ಅವರೇ ಇವೆಲ್ಲಾ ವಿಚಾರಗಳನ್ನೂ ಪ್ರೊಬ್ ಮಾಡುತ್ತಿದ್ದಾರೆ.

ಶ್ರೀ ಬಿ. ಬೈರಪ್ಪಾಜಿ.—ಇದರಲ್ಲಿ ನಷ್ಟವಾಗಲು ಮುಖ್ಯ ಕಾರಣ ಒಂದೊಂದು ವರ್ಷದಲ್ಲಿ ಒಂದೊಂದು ರೀತಿಯಾದ ರೇಟಿನಲ್ಲಿ ಇವರಿಗೆ ಕೊಡಲಾಗಿದೆ, ಇವರಿಗೆ ಒಂದು ವರ್ಷ 1045' ಎಂದು ಕೊಟ್ಟಿದ್ದರೆ, ಇತರರಿಗೆ 1100 ರಂತೆ ರೇಟಿದೆ. ಇನ್ನೊಂದು ವರ್ಷದಲ್ಲಿ ಇವರಿಗೆ 1375 ಕೊಟ್ಟಿದ್ದರೆ ಬೇರೆಯವರಿಗೆ 1525 ಎಂದು ಕೊಟ್ಟಿದ್ದಾರೆ, ಇನ್ನೊಂದು ಕಡೆಯಲ್ಲಿ ಇವರಿಗೆ 14. 8 ರೇಟು ಇದ್ದರೆ ಬೇರೆಯವರಿಗೆ 1850 ರ ವರೆಗೆ ಕೊಟ್ಟಿದ್ದಾರೆ. ಹೀಗೆ ಒಂದು ವರ್ಷದಲ್ಲಿ ರೇಟುಗಳಲ್ಲಿ ಇಷ್ಟು ವ್ಯತ್ಯಾಸಗಳು ಬಂದಿರುವುದರಿಂದ ನಷ್ಟವಾಗಿದೆ. ಇದನ್ನು ಸರಿಯಾಗಿ ತನಿಖೆ ಮಾಡಿ ಇದರ ಬಾಬತು ನಷ್ಟವನ್ನು ಇವರಿಂದ ಏಕೆ ವಸೂಲು ಮಾಡಬಾರದು ?

ಶ್ರೀ ಎಸ್. ಎಂ. ಕೃಷ್ಣ.—ಆಗ ಸ್ವಲ್ಪಮಟ್ಟಿಗೆ ಕಡಿಮೆದರದಲ್ಲಿ ಕೊಟ್ಟಿರುವುದು ನಿಜ. ಇದಕ್ಕೆ ಬೇರೆ ಬೇರೆ ಕಾರಣಗಳೂ ಇವೆ. ಇದಕ್ಕೆ ಮುಖ್ಯವಾದ ಒಂದು ಕಾರಣ ಎಂದರೆ ಆಗ ಸ್ಟೀಲು ಮಾರಾಟದಲ್ಲಿ ಬಹಳ ಪೈಪೋಟಿ ಇತ್ತು, ವೆಲ್ಡ್ ಸ್ಟೀರ್‌ನ ನಮ್ಮಲ್ಲಿನ ಬಿಲೆಟ್ಟುಗಳು ಜಾಸ್ತಿ ಮಾರಾಟ ಮಾಡಬೇಕೆಂದು, ದೊಡ್ಡ ಕಂಪನಿಗಳ ಮೂಲಕ ಮಾರಬೇಕು ಎಂದು ಈ ಭಾರತ್ ಫೋರ್ಜ್ ಕಂಪನಿಗೆ ಸ್ವಲ್ಪ ಕಡಿಮೆದರದಲ್ಲಿ ಮಾರಲಾಗಿದೆ. ಆದರೆ ಇದರಲ್ಲಿ ನಾಕಷ್ಟು ಅವ್ಯವಹಾರಗಳಾಗಿವೆ ಎಂದು ತಿಳಿದು ಬಂದುದರಿಂದ ಇವೆಲ್ಲವನ್ನೂ ಪೂರ್ಣವಾಗಿ ತನಿಖೆ ಮಾಡಲು ಶ್ರೀ ಆರ್. ಸಿ. ದತ್ ರವರನ್ನು ನೇಮಿಸಲಾಗಿದೆ. ಇವರ ವರದಿ ಬಂದ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳಬಹುದೋ ಅದನ್ನು ಆ ಮೇಲೆ ನೋಡಬಹುದು.

Sri ABDUL KHUDDUS ANWAR:—It is clear form your statement that the rate at which blooms are supplied to Bharath Forge Co. Ltd., is Rs. 1000 and bars and billets are supplied at Rs. 1100 (less 5% discount), whereas the rates at which they are supplied to others are at the rates of 1400 to 1800. But in your reply to (*d*) whether rates supplied to Bharat Forge is very low, you have said 'No'. Which is correct ?

Sri S. M. KRISHNA.—The rates differ; for *e. g.*, billets and bars. As I have just now replied, it is a fact that we have sustained loss.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮಂತ್ರಿಗಳು ಆರ್. ಸಿ. ದತ್ ರವರನ್ನು ಇಲ್ಲಿನೇಮಕ ಮಾಡಿದೆ ಎಂದರು, ಇವರಿಂದ ಯಾವಾಗ ವರದಿ ಬರುತ್ತೆ ? ಇಲ್ಲವೇ ಈಗಾಗಲೇ ಬಂದಿದೆಯೇ ? ಹಾಗೆ ಬಂದರೆ ಆ ವರದಿಗಳನ್ನು ಮಾನ್ಯ ಸದಸ್ಯರಿಗೆ ಒದಗಿಸಿಕೊಡುತ್ತಾರೆಯೇ ?

Sri S. M. KRISHNA.—Sir, I am expecting the report some time in April.

ಶ್ರೀ ಸಿ. ಬೈರೇಗೌಡ.—ಇದು ಪಬ್ಲಿಕ್ ಸೆಕ್ಟರ್ ಕಂಪನಿಯೋ ಇಲ್ಲವೇ ಪ್ರೈವೇಟ್ ಸೆಕ್ಟರ್ ಕಂಪನಿಯೋ ?

ಶ್ರೀ ಎಸ್. ಎಂ. ಕೃಷ್ಣ.—ಇದು ಪ್ರೈವೇಟ್ ಸೆಕ್ಟರ್ ಕಂಪನಿ.